# Current affairs of 2018-07-28 by KPSCVAANI.com

## * 13 ಅಂಶಗಳ ಖಾಸಗಿ ಮಾಹಿತಿಗೆ ರಕ್ಷಣೆ ಸಮಿತಿ ಗುರುತಿಸಿದ ವೈಯಕ್ತಿಕ ಮಾಹಿತಿ

ಪಾಸ್‌ವರ್ಡ್, ಆರ್ಥಿಕ ಡೇಟಾ ಸಂಬಂಧಿಸಿದ ಡೇಟಾ, ಉದ್ಯೋಗ ಸಂಬಂಧಿ ಗುರುತು, ಲೈಂಗಿಕ ಜೀವನ, ಲೈಂಗಿಕ ಒಲವು, ಬಯೋಮೆಟ್ರಿಕ್ ಡೇಟಾ, ಅನುವಂಶೀಯ ಡೇಟಾ, ಲಿಂಗ ಪರಿವರ್ತನೆಯ ಮಾಹಿತಿ, ನಪುಂಸಕತ್ವದ ಮಾಹಿತಿ, ಜಾತಿ ಅಥವಾ ಪಂಗಡ, ರಾಜಕೀಯ ಅಥವಾ ಧಾರ್ಮಿಕ ನಂಬಿಕೆ ಹಾಗೂ ಒಲವು, ಹಾಗೂ ಕಾಯ್ದೆಯ ಸೆಕ್ಷನ್ 22ರಲ್ಲಿ ಸರ್ಕಾರ ಗುರುತಿಸುವ ಇನ್ನಿತರ ಅಂಶಗಳು.

## * ವಿಶ್ವ ಪರಿಸರ ಸಂರಕ್ಷಣಾ ದಿನ




* ಪ್ರತಿ ವರ್ಷ ಜುಲೈ 28ರಂದು ವಿಶ್ವ ಪರಿಸರ ಸಂರಕ್ಷಣಾ ದಿನವನ್ನಾಗಿ ವಿಶ್ವದಾದ್ಯಂತ ಆಚರಿಸಲಾಗುತ್ತದೆ. * ಜಾಗತಿಕ ಸಂರಕ್ಷಣಾ ಸಂಸ್ಥೆಯ ವರ್ಲ್ಡ್ ವೈಲ್ಡ್ ಲೈಫ್ ಫೌಂಡೇಷನ್ ವರದಿ ಪ್ರಕಾರ 1970 ರಿಂದೀಚೆಗೆ ನಾವು ಭೂಮಿಯ ಮೇಲೆ ಬೀರುವ ಒತ್ತಡವು ದ್ವಿಗುಣವಾಗಿದೆ ಮತ್ತು ನಾವು ಅವಲಂಬಿಸಿರುವ ಸಂಪನ್ಮೂಲಗಳು ಶೇ. 33ಕ್ಕೆ ಇಳಿಕೆಯಾಗಿವೆ. * ಈ ವರ್ಷದ ಘೋಷ ವಾಕ್ಯ “ಬೀಟ್ ಪ್ಲಾಸ್ಟಿಕ್ ಪೊಲ್ಯೂಷನ್” (□□□□ □□□□□□□□ □□□□□□□□□□)

## * ಮಾನವ ಕಳ್ಳಸಾಗಣೆ ತಡೆ (ತಡೆ ಸಂರಕ್ಷಣೆ ಪುನರ್ವಸತಿ ) ತಿದ್ದುಪಡಿಗೆ 2018ಕ್ಕೆ ಲೋಕಸಭೆ ಅನುಮೋದನೆ

ಮಾನವ ಕಳ್ಳಸಾಗಣೆ ತಡೆ (ತಡೆ ಸಂರಕ್ಷಣೆ ಪುನರ್ವಸತಿ ) ತಿದ್ದುಪಡಿಗೆ 2018ಕ್ಕೆ ಲೋಕಸಭೆ ಅನುಮೋದನೆ ಇಂತಹ ಕೃತ್ಯಗಳಲ್ಲಿ ಪಾಲ್ಗೊಂಡವರಿಗೆ 10 ವರ್ಷಗಳ ಕಠಿಣ ಶಿಕ್ಷೆ ಮತ್ತು 1 ಲಕ್ಷ ರೂ. ದಂಡ ವಿಧಿಸಲು ಈ ನೂತನ ಕಾಯಿದೆ ಅನುವು. ಈ ಮಸೂದೆಯ ಪ್ರಮುಖ ಅಂಶಗಳು : * ಬಲವಂತದ ಕೂಲಿ ಉದ್ದೇಶದ ಸಾಗಣೆ, ಭಿಕ್ಷಾಟನೆ ಉದ್ದೇಶದ ಸಾಗಣೆ, ಮದುವೆ ಉದ್ದೇಶದಿಂದ ಮಹಿಳೆ ಅಥವಾ ಮಗುವನ್ನು ಅಥವಾ ಮದುವೆ ನೆಪಮೊಡ್ಡಿ ಅಥವಾ ಮದುವೆ ಬಳಿಕ ಕಳ್ಳಸಾಗಣೆ ಮಾಡುವುದನ್ನು , ನಿಯಂತ್ರಿಸುವುದು. * ಸಂತ್ರಸ್ತರು/ಸಾಕ್ಷಿದಾರರು ಹಾಗೂ ದೂರುದಾರರ ಮಾಹಿತಿಯನ್ನು ಬಹಿರಂಗಪಡಿಸದೆ ಗೋಪ್ಯತೆ ಕಾಪಾಡುವುದು. * ಮಾನವ ಕಳ್ಳಸಾಗಣೆಯನ್ನು ತಡೆಯುವ, ರಕ್ಷಿಸುವ ಹಾಗೂ ಅವರಿಗೆ ಪುನರ್ವಸತಿ ಕಲ್ಪಿಸುವ ದೃಷ್ಟಿಕೋನದಿಂದ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುವುದು. * ಸಂತ್ರಸ್ತರನ್ನು ರಕ್ಷಿಸಿದ ಕೂಡಲೇ ಅವರಿಗೆ ಸೂಕ್ತ ಭದ್ರತೆ ಹಾಗೂ ಪುನರ್ವಸತಿ ಕಲ್ಪಿಸಬೇಕು. ಸಂತ್ರಸ್ತರ ದೈಹಿಕ ಹಾಗೂ ಮಾನಸಿಕ ಆರೋಗ್ಯದ ತಪಾಸಣೆಗೆ ಅನುಕೂಲವಾಗುವಂತೆ 30 ದಿನಗಳ ಒಳಗೆ ತಕ್ಷಣ ಮಧ್ಯಂತರ ಪರಿಹಾರ ನೀಡಬೇಕು ಮತ್ತು ದೋಷಾರೋಪ ಸಿದ್ದಪಡಿಸಿದ 60 ದಿನಗಳ ಒಳಗೆ ಸೂಕ್ತ ಪರಿಹಾರ ಒದಗಿಸಬೇಕು. * ಮೊದಲ ಬಾರಿಗೆ ಪುನರ್ವಸತಿ ನಿಧಿ ಸ್ಥಾಪಿಸುವುದು ಅದನ್ನು ಸಂತ್ರಸ್ತರ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಒಳಿತಿನ ದೃಷ್ಟಿಯಿಂದ ಬಳಸುವುದು. * ಮಾನವ ಕಳ್ಳಸಾಗಣೆಗೆ ಕುಮ್ಮಕ್ಕು ನೀಡುವ ಯಾವುದೇ ಅಂಶಕ್ಕೆ ಶಿಕ್ಷೆ ನೀಡುವುದು.

## * ಕೇರಳದ ತಿರುವನಂತಪುರಂ ನಲ್ಲಿ ಮಹೀಂದ್ರಾ ಐಟಿ ಪಾರ್ಕ್ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್



ಕೇರಳದ ತಿರುವನಂತಪುರಂ ನಲ್ಲಿ ಮಹೇಂದ್ರಾ ಐಟಿ ಪಾರ್ಕ್ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್

## * ಮೋದಿ ಕೇರ್ “ಆಯುಷ್ಮಾನ್ ಭಾರತ್” ಯೋಜನೆಗೆ ಸಹಿ ಹಾಕದ 10 ರಾಜ್ಯಗಳು



ಬಿಜೆಪಿಯೇತರ ಸರಕಾರಗಳಿರುವ ಒಡಿಶಾ, ಪಂಜಾಬ್, ದಿಲ್ಲಿ, ಕರ್ನಾಟಕ, ತೆಲಂಗಾಣ, ತಮಿಳುನಾಡು, ಕೇರಳ, ಬಿಜೆಪಿ ಆಡಳಿತ ಇರುವ ರಾಜಸ್ಥಾನ, ಮಹಾರಾಷ್ಟ ಮತ್ತು ಗೋವಾ ಸರಕಾರಗಳು ಈ ಯೋಜನೆಯಲ್ಲಿ ಪಾಲ್ಗೊಳ್ಳುವ ಒಪ್ಪಂದಕ್ಕೆ ಇನ್ನೂ ಸಹಿ ಹಾಕಿಲ್ಲ.

## * ವಾಣಿಜ್ಯ ಸಮರದ ವಿರುದ್ದ ಒಗ್ಗಟ್ಟಿನ ಮಂತ್ರ ಬ್ರಿಕ್ಸ್ ದೇಶಗಳು



ವಿದೇಶಿ ವಸ್ತುಗಳ ಮೇಲೆ ಭಾರಿ ಪ್ರಮಾಣದ ಸುಂಕ ವಿಧಿಸುವ ಮೂಲಕ ಅಮೆರಿಕ ಆರಂಭಿಸಿರುವ ವಾಣಿಜ್ಯ ಸಮರವನ್ನು ಒಗ್ಗಟ್ಟಿನ ಮೂಲಕ ಎದುರಿಸುತ್ತೇವೆ ಬ್ರಿಕ್ಸ್ ರಾಷ್ಟ್ರಗಳ ಶೃಂಗಸಭೆಯಲ್ಲಿ ಸದಸ್ಯ ರಾಷ್ಟ್ರಗಳು (ಬ್ರೆಜಿಲ್, ರಷ್ಯಾ, ಭಾರತ, ಚೀನಾ,ಮತ್ತು ದಕ್ಷಿಣ ಆಫ್ರಿಕಾ) ಹೊಸ ಕರೆನ್ಸಿ ಅಭಿವೃದ್ಧಿಗೆ ಚಿಂತನೆ : ಬ್ರಿಕ್ಸ್ ದೇಶಗಳ ಮಧ್ಯೆ ವಹಿವಾಟು ನಡೆಸಲು ಅನುಕೂಲವಾಗುವಂತೆ ಸದಸ್ಯ ರಾಷ್ಟ್ರಗಳು ಜಂಟಿಯಾಗಿ ಹೊಸ ಕರೆನ್ಸಿ (ಹಣ) ಚಲಾವಣೆಗೆ ತರಬೇಕು ಎಂಬ ಪ್ರಸ್ತಾವವಿದೆ ಎಂದು ಬ್ರಿಕ್ಸ್ ವಾಣಿಜ್ಯ ಮಂಡಳಿ ಹೇಳಿದೆ. ಭಾರತದ ಕಂಪನಿಗೆ ಪ್ರಶಂಸೆ : ಬ್ರಿಕ್ಸ್ ಅಂಗವಾಗಿ ರಷ್ಯಾದ ಸೈಬೀರಿಯಾ ಪ್ರಾಂತದಲ್ಲಿ ಭಾರತದ ‘ಸನ್ ಗೋಲ್ಡ್ ಲಿಮಿಟೆಡ್’ ನೇತೃತ್ವದಲ್ಲಿ ನಡೆಯುತ್ತಿರುವ ಚಿನ್ನದ ಗಣಿ ಯೋಜನೆ ಬಗ್ಗೆ ಶೃಂಗಸಭೆಯಲ್ಲಿ ಪ್ರಶಂಸೆ ವ್ಯಕ್ತವಾಗಿದೆ. ಜಗತ್ತಿನ ಮಹಾ ಮಾರುಕಟ್ಟೆ : ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಶೇ 40ರಷ್ಟು ಜನರು ಬ್ರಿಕ್ಸ್ ದೇಶಗಳಲ್ಲೇ ಇದ್ದಾರೆ. ಸದಸ್ಯ ರಾಷ್ಟ್ರಗಳ ನಡುವಣ ವಾಣಿಜ್ಯ ವಹಿವಾಟು 2017ರಲ್ಲಿ ಶೇ 30ರಷ್ಟು ವೃದ್ಧಿಸಿದೆ. ಸದಸ್ಯ ರಾಷ್ಟ್ರಗಳ ನಡುವಣ %ಏಲ್ಲದ ವಾಣಿಜ್ಯ ವಹಿವಾಟು 2017ರಲ್ಲಿ ಶೇ. ವಾಣಿಜ್ಯ ವಹಿವಾಟು 2017ರಲ್ಲಿ ಶೇ ಜನಸಂಖ್ಯೆಯಲ್ಲಿ ಬ್ರಿಕ್ಸ್ 30ರಷ್ಟು ವೃದ್ಧಿಸಿದ. ವಿಶ್ವದ ಜಿಡಿಪಿಯಲ್ಲಿ 42% ಬ್ರಿಕ್ಸ್ ರಾಷ್ಟ್ರಗಳ ಪಾಲು.

## * ವೊಡಾಫೋನ್, ಐಡಿಯಾ ವಿಲೀನಕ್ಕೆ ಸರ್ಕಾರ ಸಮ್ಮತಿ




ಬ್ರಿಟನ್ನಿನ ದೈತ್ಯ ದೂರಸಂಪರ್ಕ ಸಂಸ್ಥೆ ವೊಡಾಫೋನ್ ಮತ್ತು ಆದಿತ್ಯ ಬಿರ್ಲಾ ಸಮೂಹದ ಐಡಿಯಾ ಸೆಲ್ಯುಲರ್ ವಿಲೀನದಿಂದ ದೇಶದ ಅತಿದೊಡ್ಡ ಮೊಬೈಲ್ ಸೇವಾ ಸಂಸ್ಥೆ ಅಸ್ತಿತ್ವಕ್ಕೆ ಬರಲಿದೆ. ದೇಶಿಯ ಮೊಬೈಲ್ ಮಾರುಕಟ್ಟೆಯ ಶೇ 35ರಷ್ಟು ಪಾಲು ಈ ಸಂಸ್ಥೆಯ ವಶದಲ್ಲಿ ಇರಲಿದೆ. ವೊಡಾಫೋನ್ ಮತ್ತು ಐಡಿಯಾ ಜಂಟಿ ಸಂಸ್ಥೆಯ ಒಟ್ಟಾರೆ ಚಂದಾದಾರರ ಸಂಖ್ಯೆ 43 ಕೋಟಿಗಳಷ್ಟಾಗಲಿದೆ. 34 ಕೋಟಿ ಚಂದಾದಾರರನ್ನು ಹೊಂದಿರುವ ಭಾರ್ತಿ ಏರ್‌ಟೆಲ್ ಎರಡನೇ ಸ್ಥಾನಕ್ಕೆ ಇಳಿಯಲಿದೆ. ವಿಲೀನದ ಬಳಿಕ : 1.56 ಕೋಟಿ ಲಕ್ಷ ಕೋಟಿ ವಿಲೀನದ ನಂತರದ ಒಟ್ಟಾರೆ ಸಂಪತ್ತು 43 ಕೋಟಿ ಒಟ್ಟು ಚಂದಾದಾರ ಸಂಖ್ಯೆ. 35% ಮೊಬೈಲ್ ಮಾರುಕಟ್ಟೆಯಲ್ಲಿನ ಪಾಲು.

## * ದಿನ ವಿಶೇಷ : ವಿಶ್ವಹೆಪಟೈಟಿಸ್ ದಿನ




ಪ್ರತಿ ವರ್ಷ ಜುಲೈ 28ರಂದು ವಿಶ್ವಹೆಪಟೈಟಿಸ್ ದಿನವನ್ನು ಆಚರಿಸಲಾಗುತ್ತದೆ ಏನಿದು ಹೆಪಟೈಟಿಸ್ : ಯಕೃತ್ತಿನಲ್ಲಿ (ಲಿವರ್) ಉರಿಯೂತವನ್ನುಂಟು ಮಾಡುವ ಲಕ್ಷಣಗಳು ಅಥವಾ ರೋಗಗಳಿಗೆ ಹೆಪಟೈಟಿಸ್ ಎಂದು ಹೇಳಲಾಗುತ್ತದೆ. ಈ

ಉರಿಯೂತ ಸತತ ಮದ್ಯಪಾನ ಸೇವನೆಯಿಂದ ಅಥವಾ ವೈರಸ್‌ಸುಗಳಿಂದ ಉಂಟಾಗಬಹುದು. ಹೆಪಟೈಟಿಸ್ ಅನ್ನು ಹೆಪಟೈಟಿಸ್ ಎ,ಬಿ, ಸಿ ಮತ್ತು ಡೆಲ್ಟಾ ಫ್ಯಾಕ್ಟರ್ ಎಂದು ಗುರುತಿಸಲಾಗುವ ವೈರಸ್‌ಸುಗಳಿಂದ ಹರಡಬಹುದು. ದಿನ ಹೇಗೆ ಆರಂಭವಾಯಿತು? : 2010ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ವಿಶ್ವ ಹೆಪಟೈಟಿಸ್ ದಿನ ಆಚರಣೆಯನ್ನು ಅಂಗೀಕರಿಸಿತು. ಜತೆಗೆ ಜುಲೈ 28 ಹೆಪಟೈಟಿಸ್ ವೈರಸ್ ಕಂಡು ಹಿಡಿದ ಮತ್ತು ಹೆಪಟೈಟಿಸ್ ರೋಗಕ್ಕೆ ಲಸಿಕೆ ಕಂಡುಹಿಡಿದ ನೊಬೆಲ್ ಪ್ರಶಸ್ತಿ ವಿಜೇತ ಪ್ರೊಫೆಸರ್ ಬರೂಚ ಸಾಮ್ಯುಯಲ್ ಬ್ಲೂಮ್ ಬರ್ಗ್ ಅವರ ಜನ್ಮದಿನವಾಗಿದೆ. ಅವರ ಗೌರವಾರ್ಥ ಜುಲೈ 28 ಅನ್ನು ವಿಶ್ವ ಹೆಪಟೈಟಿಸ್ ದಿನವಾಗಿ ಆಚರಿಸಲಾಗುತ್ತದೆ. ಹರಡುವುದು ಹೇಗೆ? : ಪಿತ್ತಜನಕಾಂಗವು ಮನುಷ್ಯನ ದೇಹದ ಮುಖ್ಯ ಅಂಗವಾಗಿದ್ದು, ಕಾರ್ಬೋಹೈಡ್ರೇಟ್ಸ್, ಪ್ರೋಟೀನ್‌ಗಳನ್ನು ಪಚನಗೊಳಿಸಿ ದೇಹಕ್ಕೆ ಶಕ್ತಿ ನೀಡುತ್ತದೆ. ಕಲುಷಿತ ನೀರು, ಸ್ವಚ್ಛಗೊಳಿಸದ ಸಿರಿಂಜ್ ಉಪಯೋಗ, ತಪಾಸಣೆಗೊಳಪಡಿಸದ ರಕ್ತ ಪಡೆಯುವುದರಿಂದ ಹೆಪಟೈಟಿಸ್ ಕಾಯಿಲೆ ಬರುತ್ತದೆ. ಹೆಪಟೈಟಿಸ್ ಎ ಮತ್ತು ಇ ಮಾದರಿಯ ವೈರಸ್‌ಗಳು ಕಲುಷಿತ ಆಹಾರ ಮತ್ತು ನೀರಿನಿಂದ ಹರಡುತ್ತವೆ. ಬಿ.ಸಿ ಮತ್ತು ಡಿ ಮಾದರಿಯ ವೈರಸ್ ಗಳು ಸೋಂಕು ತಗುಲಿದ ವ್ಯಕ್ತಿಗಳ ದೇಹಗಳ ಸ್ರಾವದಿಂದ ಹರಡುತ್ತದೆ. ಹೆಪಟೈಟಿಸ್ ಬಿ ಮತ್ತು ಸಿ ಸೋಂಕುಗಳು ಪಿತ್ತಜನಕಾಂಗದ ಕ್ಯಾನ್ಸರ್‌ಗೆ ಮೂಲ ಕಾರಣವಾಗುತ್ತದೆ. ಹೆಪಟೈಟಿಸ್ ಬಿ : ಹೆಪಟೈಟಿಸ್ ಬಿ ಸೋಂಕು ಪಿತ್ತಜನಕಾಂಗದ ಕ್ಯಾನ್ಸರ್‌ಗೂ ಕಾರಣವಾಗುತ್ತದೆ. ಒಂದು ಬಾರಿ ಲಿವರ್ ಕ್ಯಾನ್ಸರ್‌ಗೆ ತುತ್ತಾದ ರೋಗಿಯ ರೋಗನಿರೋಧಕ ಶಕ್ತಿ ಕುಂದುತ್ತದೆ. ತೂಕ ಇಳಿಕೆಯಿಂದ ಬಳಲುತ್ತಾರೆ. ಕ್ಯಾನ್ಸರ್ ಪಿತ್ತ ಜನಕಾಂಗದಿಂದ ದೇಹದ ಇತರ ಭಾಗಗಳಿಗೂ ಹರಡುತ್ತದೆ ಹಾಗೂ ಇದು ಸಾವಿಗೂ ಕಾರಣವಾಗುತ್ತದೆ. ಮಾರಕ ಹೆಪಟೈಟಿಸ್ ರೋಗಕ್ಕೆ ಲಸಿಕೆಯೇ ಪರಿಹಾರ. ಈ ಲಸಿಕೆಯಿಂದಾಗಿ ಹೆಪಟೈಟಿಸ್ ಬಿ ಸೋಂಕು, ಸಿರೋಸಿಸ್ ಮತ್ತು ಲಿವರ್ ಕ್ಯಾನ್ಸರ್ ತಡೆಗಟ್ಟಬಹುದು. ರೋಗ ಲಕ್ಷಣಗಳು : ಆಯಾಸ, ಕೀಲುನೋವು, ಸಣ್ಣಗೆ ಜ್ವರ, ತಲೆಸುತ್ತುವಿಕೆ, ವಾಂತಿ, ಹಸಿವಾಗದಿರುವಿಕೆ, ಹೊಟ್ಟೆ ನೋವು, ಚರ್ಮ ಹಳದಿ ಬಣ್ಣಕ್ಕೆ ತಿರುಗುವುದು ಮುಂತಾದವು ಹೆಪಟೈಟಿಸ್ ಲಕ್ಷಣಗಳಾಗಿವೆ. ತಡೆಗಟ್ಟುವುದು ಹೇಗೆ? : ಸುರಕ್ಷಿತವಾದ ನೀರು ಮತ್ತು ಆಹಾರ ಸೇವನೆ,ರಕ್ತ ಪೂರಣ ಮಾಡುವಾಗ ಮತ್ತು ರಕ್ತದ ಕಣಗಳನ್ನು ಪಡೆದುಕೊಳ್ಳುವಾಗ ಸಾಕಷ್ಟು ಮುಂಜಾಗ್ರತೆ ವಹಿಸುವುದು, ಒಬ್ಬ ವ್ಯಕ್ತಿ ಬಳಸಿದ ಸೂಜಿಯನ್ನು ಮತ್ತೊಬ್ಬ ವ್ಯಕ್ತಿ ಬಳಸದೇ ಇರುವುದು ಹಾಗೂ ಲಸಿಕೆ ಹಾಕಿಸಿಕೊಳ್ಳುವುದು.

## * ಎಚ್ಐವಿ ಸೋಂಕಿತರ ಸಂಖ್ಯೆ ಇಳಿಮುಖ




ವಿಶ್ವ ಸಂಸ್ಥೆಯ ಏಡ್ಸ್ ನಿಯಂತ್ರಣ ಆಯೋಗ (ಯುಎನ್‌ಎಐಡಿಎಸ್) ವರದಿ 18 % ಕಳೆದ ಏಳು ವರ್ಷಗಳ ಅವಧಿಯಲ್ಲಿ ವಿಶ್ವದಲ್ಲಿ ಕಡಿಮೆಯಾದ ಎಚ್ಐವಿ ಪೀಡಿತರ ಸಂಖ್ಯೆ 36.9 ದಶ ಲಕ್ಷ 2017 ರ ಅಂತ್ಯದ ವೇಳೆಗೆ ವಿಶ್ವದಲ್ಲಿ ಇರುವ ಎಚ್ಐವಿ ಪೀಡಿತರ ಸಂಖ್ಯೆ